ಸಾಕ್ಷಿಯನ್ನು ದಿನಾಂಕಃ 29-08-2024 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟೀಸವಾಲುಃ ಶ್ರೀಃ ಜೆ.ಪಿ.ಬಿ , ಪ್ರತಿವಾದಿ ಪರ ವಕೀಲರಿಂದಃ

4 . ಈ ದಾವೆಯನ್ನು ದಾಖಲು ಮಾಡುವುದಕ್ಕಿಂತ ಪೂರ್ವದಲ್ಲಿ ನಾನಾಗಲಿ ಅಥವಾ ನನ್ನ ಸಹೋದರನಾಗಲಿ ಪ್ರತಿವಾದಿಗೆ ಯಾವುದೇ ನೋಟೀಸನ್ನು ನೀಡಿರುವುದಿಲ್ಲ . ನಮ್ಮ ಆಸ್ತಿಯನ್ನು ಪ್ರತಿವಾದಿಯು ಒತ್ತುವರಿ ಮಾಡಿಕೊಂಡಿದ್ದಾರೆ ಎಂದು ಹೇಳಿ ಪ್ರತಿವಾದಿಗೆ ಯಾವುದೇ ಪತ್ರವನ್ನು ಲಿಖಿತವಾಗಿ ನೀಡಿರುವುದಿಲ್ಲ . ನಮ್ಮ ಆಸ್ತಿಯನ್ನು ಅಳತೆ ಮಾಡಿದ್ದೇವೆ . ನಮ್ಮ ಆಸ್ತಿ ಒಂದೂವರೆ ಎಕರೆಗಿಂತ ಕಡಿಮೆ ಇದೆ ಎಂದು ಹೇಳಿ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇವೆ . ಆ ವರದಿಯು ಸರ್ವೇಯವರ್ ರವರು ನೀಡಿರುವ ವರದಿಯಾಗಿರುತ್ತದೆ . ನಮ್ಮ ಆಸ್ತಿಯು ಒಂದೂವರೆ ಎಕರೆಗಿಂತ ಕಡಿಮೆ ಇದೆ ಎಂದು ಹೇಳಿ ಯಾವುದೇ ಸರ್ವೇಯರ್ ರವರು ವರದಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ . ಅಂತಹ ಯಾವುದೇ ದಾಖಲೆಯನ್ನು ನಾನು ಮಾನ್ಯ ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ . ಈಗ ನಾವು ಸ್ವಾಧೀನದಲ್ಲಿ ಇರುವ ಆಸ್ತಿಯ ವಿಸ್ತೀರ್ಣವು ಒಂದೂವರೆ ಎಕರೆ ಇದೆ ಎಂದರೆ ಸರಿಯಲ್ಲ . ನಮ್ಮ ಜಾಗವನ್ನು ಪ್ರತಿವಾದಿಯು ಯಾವತ್ತೂ ಸಹ ಒತ್ತುವರಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ .

5. ಪ್ರತಿವಾದಿಯವರ ಆಸ್ತಿಯಲ್ಲಿ ಸುಮಾರು 40 ವರ್ಷಗಳಿಗಿಂತ ಮೇಲ್ಪಟ್ಟ ಗೇರು ಬೀಜದ ಮರಗಳು ಮತ್ತು ಇತರೆ ಫಲಭರಿತ ಮರಗಳು ಇವೆ ಎಂದರೆ ಇಲ್ಲ . ಪ್ರತಿವಾದಿಯವರ ಆಸ್ತಿಯ ಸುತ್ತಲೂ ಹಳೆಯ ಕಾಂಪೌಂಡ್ ಗೋಡೆ ಇರುವುದಿಲ್ಲ . ಪ್ರತಿವಾದಿಯವರು ನಮ್ಮ ಆಸ್ತಿಯನ್ನು ಯೂವುದೇ ರೀತಿಯಲ್ಲಿ ಒತ್ತುವರಿ ಮಾಡಿಕೊಂಡಿರುವುದಿಲ್ಲ , ಆದ್ದರಿಂದ ಪ್ರತಿವಾದಿಯು ಯಾವುದೇ ಆಸ್ತಿಯನ್ನು ನಮಗೆ ಬಿಟ್ಟುಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ .

ನಾವು ಹಾಜರು ಪಡಿಸಿರುವ ನಿಪಿ-4 ಮತ್ತು ನಿಪಿ-5 ನಕಾಶೆಗಳನ್ನು ಈ ದಾವೆಗಾಗಿ ಸೃಷ್ಠಿ ಮಾಡಲಾಗಿರುವ ದಾಖಲೆಗಳು ಎಂದರೆ ಸರಿಯಲ್ಲ . ಒಂದು ವೇಳೆ ಪ್ರತಿವಾದಿಯು ಒತ್ತುವರಿ ಮಾಡಿಲಾಗಿದೆ ಎಂದು ಹೇಳಲಾಗಿರುವ ಭೂಮಿಯನ್ನು ಬಿಟ್ಟುಕೊಟ್ಟರೆ ಆಗ ನಮ್ಮ ಆಸ್ತಿಯು ಒಂದು ಎಕರೆ 61 ಸೆಂಟ್ಸ್ ಆಗುತ್ತದೆ ಈ ಮೂಲಕ ನಮ್ಮ ಆಸ್ತಿಯ ವಿಸ್ತೀರ್ಣ ಹೆಚ್ಚಾಗುತ್ತದೆ ಎಂದರೆ ಸರಿಯಲ್ಲ . ಈ ದಾವೆಯನ್ನು ದಾಖಲು ಮಾಡಲು ಸಕಾರಣ ಇಲ್ಲ ಎಂದರೆ ಸರಿಯಲ್ಲ . ಪ್ರತಿವಾದಿಯರು ಮಾಸಿಕವಾಗಿ ರೂ 5000/- ಗಳಂತೆ ಮಧ್ಯಾಕಾಲೀನ ಲಾಭಗಳನ್ನು ನಮಗೆ ನೀಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ . ನಾನು ಈ ದಾವೆಯಲ್ಲಿ ಕೇಳಿರುವ ಪರಿಹಾರವನ್ನು ಪಡೆಯಲು ಬಾಧ್ಯಾಷ್ಟರಲ್ಲ ಎಂದರೆ ಸರಿಯಲ್ಲ .

(ಮರುವಿಚಾರಣೆ ಇಲ್ಲ.)

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು .

ಓದಿ ಹೇಳಿ ಕೇಳಿ ಸರಿ ಇದೆ

ಸಹಿ/-

ವ್ಯ ನ್ಯಾ ಮತ್ತು ಪ್ರ.ದ.ನ್ಯಾದಂ.
ಮೂಡಬಿದಿರೆ